ಮಾರಾಟ ಮಾಡಿದ್ದಾರೆ. ರೈತರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಇನ್ನಿತರೆ ಅನುಕೂಲಗಳನ್ನು ಮಾಡಿದ್ದೇವೆ. ಹತ್ತಿ ಬೀಜಗಳನ್ನು ತಕ್ಷಣವೇ ತಯಾರು ಮಾಡುವುದಕ್ಕಾಗುವುದಿಲ್ಲ. ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕು. ಅವರು ಅದರ ಬಗ್ಗೆ ಪ್ರಯೋಗವನ್ನು ಮಾಡಿ ಬೀಜವನ್ನು ತಯಾರು ಮಾಡಬೇಕಾದರೆ ಕನಿಷ್ಟ ೨ ವರ್ಷಗಳಾದರೂ ಬೇಕಾಗುತ್ತವೆ. ಈ ಬಗ್ಗೆ ಇರತಕ್ಕಂತಹ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಅಧಿಕಾರಿಗಳ ವಿಾಟಿಂಗ್‌ನ್ನು ಹಲವಾರು ಸಲ ಮಾಡಿದ್ದೇನೆ. ಖಾಸಗಿ ವಿಜಿನ್ಸಿಯಂಪರನ್ನೂ ಕೂಡ ಇದರಲ್ಲಿ ಇನ್ವಾಲ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಆಂಧ್ರದಿಂದ ತರಿಸಿ.

ಶ್ರೀ ಆರ್. ವಿ ದೇಶಪಾಂಡೆ.—ಮಹಾರಾಷ್ಟ್ರ ಸೀಡ್ಸ್ ಕಾರ್ಪೊರೇಷನ್‌ನಿಂದ ತರಿಸಿ ರೈತರಿಗೆ ಮಾರಾಟ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ. ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಹಾಗೂ ಈ ಬೀಜವನ್ನು ಹೆಚ್ಚು ಬೆಳೆಯಬೇಕೆಂಬ ಉದ್ದೇಶದಿಂದ ೮೧ ರೂಪಾಯಿಗಳ ಪ್ರಕಾರ ಬೀಜವನ್ನು ಕಳೆದ ವರ್ಷ ಪರ್ಚೇಸ್ ಮಾಡಿದ್ದರೆ. ಈ ವರ್ಷ ಅದೇ ಬೀಜವನ್ನು ೧೨೦ ರೂಪಾಯಿಗಳ ಪ್ರಕಾರ ಪರ್ಚೇಸ್ ಮಾಡಿದ್ದೇವೆ. ಸಿ.ಎಚ್ ೫ ಜವಾರ್ ಹಾಗೂ ಸನ್‌ಫ್ಲವರ್ ಬೀಜಗಳ ಕೊರತೆ ಇದೆ. ಆದರೂ ರೈತರಿಗೆ ಎಷ್ಟು ಅನುಕೂಲ ಮಾಡಬೇಕೊ ಅಷ್ಟೆಲ್ಲಾ ಮಾಡಿದ್ದೇನೆ. ಜೊತೆಗೆ ಇಪತ್ತೇ ನನ್ನ ಇಲಾಖೆಯ ಬೇಡಿಕೆ ಇರುವುದರಿಂದ ವಿಷದವಾಗಿ ಚರ್ಚೆ ಮಾಡುವುದು, ಆದ್ದರಿಂದ ಇದರ ಬಗ್ಗೆ ನಿಲುವಳಿ ಸೂಚನೆಗೆ ಅವಕಾಶ ಕೊಡುವುದು ಸೂಕ್ತವಲ್ಲವೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವಿಷಯ ಬಹಳ ಮಹತ್ವವಾಗಿದ್ದು, ಇಂದೇ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಇರುವುದರಿಂದ ಆ ಸಮಯದಲ್ಲಿ ಮಾತನಾಡಲು ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಈ ಇಲಾಖೆಯ ಬೇಡಿಕೆಯ ಬಗ್ಗೆ ಚರ್ಚೆಯನ್ನು ಶ್ರೀಮಾನ್ ಲಕ್ಕಪ್ಪನವರು ಪ್ರಾರಂಭ ಮಾಡುತ್ತಾರೆ. ಅವರ ನಂತರ ನಿಮಗೇ ಅವಕಾಶವನ್ನು ಕೊಡುತ್ತೇನೆ ಆಗ ತಾವು ಹೆಚ್ಚು ವಿಚಾರಗಳನ್ನು ಸವಿಸ್ತಾರವಾಗಿ ತಿಳಿಸಬಹುದು. ಆದ್ದರಿಂದ ನೀವು ಕೊಟ್ಟಿರುವಂತಹ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ.

೧೨-೫೦ ಪಿ. ಎಂ.

ಗಮನ ಸೆಳೆಯುವ ಸೂಚನೆ

ಕುಂದಾಪುರ ತಾಲ್ಲೂಕಿನ ನಿರೋಡಿ ಗ್ರಾಮದ ಗೌರಿಪೂಜಾರ್ತಿ ಕಾಣೆಯಾಗಿರುವ ಬಗ್ಗೆ ಪೋಲೀಸರು ನಡೆಸಿರುವ ವಿಚಾರಣೆ

ಶ್ರೀ ಬಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೮-೨-೮೮ರಂದು ಸುಶೀಲ ಎನ್ನುವ ೧೪ ವರ್ಷದ ನಿರೋಡಿ ಗ್ರಾಮದ ಬಾಲಕಿ ಬೈಂದೂರು ಠಾಣೆಗೆ ಬಂದು ತನ್ನ ತಾಯಿ ಗೌರಿ ಪೂಜಾರ್ತಿ ೫-೨-೮೮ರಿಂದ ಕಾಣೆಯಾಗಿದ್ದಾಳೆ ಎಂದು ಕೊಟ್ಟ ಫಿರ್ಯಾದಿ ಮೇರೆಗೆ ಕೇಸನ್ನು ದಾಖಲು ಮಾಡಿಕೊಂಡು ಬೈಂದೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರು ವಿಚಾರಣೆ ನಡೆಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ದಿನಾಂಕ ೮-೨-೮೮ರಂದು ಸುಶೀಲ ಎನ್ನುವ ೧೪ ವರ್ಷದ ನೀರೋಡಿ ಗ್ರಾಮದ ಬಾಲಕಿ ಬೈಂದೂರು ಠಾಣೆಗೆ ಬಂದು ತನ್ನ ತಾಯಿ ಗೌರಿ ಪೂಜಾರ್ತಿ ೫-೨-೮೮ರಿಂದ ಕಾಣೆಯಾಗಿದ್ದಾಳೆ ಎಂದು ಕೊಟ್ಟ ಫಿರ್ಯಾದಿ ಮೇರೆಗೆ ಕೇಸನ್ನು ದಾಖಲು ಮಾಡಿಕೊಂಡು ಬೈಂದೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರು ವಿಚಾರಣೆ ನಡೆಸಿರುತ್ತಾರೆ. ನೀರೋಡಿ ಮತ್ತು ಅಕ್ಕಪಕ್ಕದ ಗ್ರಾಮಗಳಿಗೆ ಭೇಟಿ ನೀಡಿ ವಿಚಾರಿಸಿದಾಗ ಕಾಣೆಯಾದ ಗೌರಿ ಪೂಜಾರ್ತಿ ಸುಮಾರು ೧೦ ವರ್ಷದ ಹಿಂದೆ ತನ್ನ ಗಂಡನನ್ನು ಬಿಟ್ಟು ಬೇರೆ ಇನ್ನಿಬ್ಬರ ಜೊತೆ ಅಕ್ರಮ ಸಂಪರ್ಕ ಇಟ್ಟುಕೊಂಡಿದ್ದು ಗಂಡನನ್ನು ಬಿಟ್ಟ ಮೇಲೆ ಎರಡು ಗಂಡು ಮಕ್ಕಳಿಗೆ ಜನ್ಮ ಕೊಟ್ಟಿದ್ದಾಗೆ ತಿಳಿದು ಬಂದಿದೆ. ಕಾಣೆಯಾದ ಸಮಯದಲ್ಲಿ ಆಕೆ ತನ್ನ ತಂಗಿಯ ಜೊತೆಗೆ ವಾಸಮಾಡುತ್ತಿದ್ದಳು. ದಿನಾಂಕ ೫-೨-೮೮ರ ಮುಂಜಾನೆ ಗದ್ದೆಗೆ ಹೋದ ಗೌರಿ ಪೂಜಾರ್ತಿ ತಿರುಗಿ ಬರಲಿಲ್ಲ. ಕೆಲವು ಸ್ಥಳೀಯ ವ್ಯಕ್ತಿಗಳು ಈ ಸಂದರ್ಭವನ್ನು ಬಳಸಿ

ಕೊಂಡು ಪೋಲೀಸರ ಮೇಲೆ ದೂರು ಕೊಡಲು ಕಾರಣವಾದವಳ ಮಕ್ಕಳಿಗೆ ಉತ್ತೇಜನ ಕೊಟ್ಟಿರುವುದಾಗಿ ತಿಳಿದು ಬಂದಿವೆ. ಮಾನ್ಯ ಹಿಂದಿನ ಗೃಹ ಮಂತ್ರಿಗಳು ಈ ಪ್ರಕರಣವನ್ನು ವಿಚಾರಣೆಗಾಗಿ ಸಿ.ಒ.ಡಿ.ಗೆ ಒಪ್ಪಿಸಿರುತ್ತಾರೆ.

ದಿನಾಂಕ ೧೩–೩–೧೯೮೮ರಂದು ಬೆಳಿಗ್ಗೆ ೧೦–೨೫ ಗಂಟೆಯ ಸಮಯದಲ್ಲಿ ಉಪ್ಪಂದ ಗ್ರಾಮದ ರಮೇಶ ಮತ್ತು ಮಂಜು ಎಂಬುವರು ಬೈಂದೂರು ಠಾಣೆಗೆ ಹಾಜರಾಗಿ ತಮ್ಮ ಊರಿನ ಶ್ರೀಮತಿ ಕೃಷ್ಣಿ ಎಂಬುವಳ ಮನೆಗೆ ಹಿಂದಿನ ರಾತ್ರಿ ನುಗ್ಗಿದ ಅಪರಿಚಿತನನ್ನು ಹಿಡಿದಿಟ್ಟಿರುವುದಾಗಿ ಕೊಟ್ಟ ಫಿರ್ಯಾದಿ ಮೇರೆಗೆ ಇಬ್ಬರು ಪೋಲೀಸ್‌ನವರು ಒಂದು ಆಟೋದಲ್ಲಿ ನುಗ್ಗೆಬೆಟ್ಟುಗೆ ಹೋಗಿ ಅಲ್ಲಿ ಪ್ರಜ್ಞಾಹೀನನಾಗಿ ಬಿದ್ದ ಒಬ್ಬ ವ್ಯಕ್ತಿಯನ್ನು ಎಚ್ಚರಗೊಳಿಸುವ ಪ್ರಯತ್ನದಲ್ಲಿ ವಿಫಲಗೊಂಡಿದ್ದರಿಂದ ಅದೇ ಆಟೋದಲ್ಲಿ ೧೪ನೇ ತಾರೀಖು ಮುಂಜಾನೆ ಬೈಂದೂರಿಗೆ ಕರೆದುಕೊಂಡು ಬಂದಿರುತ್ತಾರೆ. ಆತನ ಶರೀರದ ಹಣೆತಲೆ, ಎದೆ, ಮುಖಕ್ಕೆ ಹಲವಾರು ಕಡೆಗಳಲ್ಲಿ ಪೆಟ್ಟುಗಳು ಆಗಿದ್ದನ್ನು ಕಂಡರು. ವಿಚಾರಣೆಯಲ್ಲಿ ಆತನ ಹೆಸರು ಪದ್ಮನಾಭ ಎಂತಲೂ ಮತ್ತು ಆತನು ಶ್ರೀಮತಿ ಕೃಷ್ಣಿ ಮನೆಯೊಳಗೆ ನುಗ್ಗಿದಾಗ ಅವರು ಎಚ್ಚರಗೊಂಡು ಕೂಗಿಕೊಳ್ಳಲಾಗಿ ಅಲ್ಲಿ ನೆರೆದ ಜನರು ಆತನನ್ನು ಹೊಡೆದು ಹಾಕಿರುವುದರ ಪ್ರಯುಕ್ತ ಬೈಂದೂರು ಠಾಣೆಯಲ್ಲಿ ಪೋಲೀಸರು ಹಳ್ಳಿಯ ಜನರ ಮೇಲೆ ಒಂದು ಕೇಸು ನೋಂದಾಯಿಸಿಕೊಂಡು ವಿಚಾರಣೆ ಕೈಗೊಂಡರು. ಮುಂದೆ ಬೈಂದೂರು ಆಸ್ಪತ್ರೆಯಲ್ಲಿ ಡಾಕ್ಟರು ಇಲ್ಲದ ಪ್ರಯುಕ್ತ ಗಾಯಗೊಂಡ ಪದ್ಮನಾಭನನ್ನು ಶಿರೂರಿಗೆ ಕರೆದುಕೊಂಡುಹೋದರು. ಅಲ್ಲಿನ ಡಾಕ್ಟರ್ ಸಲಹೆಯ ಮೇರೆಗೆ ಮಣಿಪಾಲ್ ಆಸ್ಪತ್ರೆಗೆ ಸೇರಿಸಲಾಗಿ ಆತ ೧೯–೩–೧೯೮೮ ರಾತ್ರಿ ೮–೦೦ ಘಂಟೆಗೆ ಅಸುನೀಗಿದ, ನುಗ್ಗೆಬೆಟ್ಟು ಹಳ್ಳಿಯಲ್ಲಿ ಪೆಟ್ಟು ಕಿಂದ ಸಮಯದಿಂದ ಸಾಯುವವರೆಗೆ ಆತ ಪ್ರಜ್ಞಾಹೀನನಾಗಿದ್ದು, ಆತ ಶತ್ರು ಮೇಲೆ ಊರಿನವರ ಮೇಲೆ ನೋಂದಾಯಿಸಿಕೊಂಡ ಮೊಕದ್ದಮೆಯನ್ನು ಕೊಲೆ ಪ್ರಕರಣವಾಗಿ ಪರಿವರ್ತಿಸಲಾಯಿತು. ಹಿಂದೆ ಶ್ರೀಮತಿ ಕೃಷ್ಣಿಯವರ ದೂರಿನ ಮೇರೆಗೆ ಮನೆಗೆ ನುಗ್ಗಿ ಹೆಂಗಸರ ಮೇಲೆ ಕೈಹಾಕಿದ್ದಕ್ಕೆ ಶ್ರೀ ಪದ್ಮನಾಭರವರ ಮೇಲೆ ಐಪಿಸಿ ಕಲಂ ೪೪೨ ೫೫೪ರಂತೆ ಒಂದು ಕೇಸು ನೋಂದಾಯಿಸಿಕೊಳ್ಳಲಾಯಿತು. ಪದ್ಮನಾಭನನ್ನು ಹೊಡೆದವರನ್ನು ಪತ್ತೆ ಹಚ್ಚಲಾಗುತ್ತಿದೆ.

ಈ ಎರಡೂ ಪ್ರಕರಣಗಳಲ್ಲಿ ಪೋಲೀಸರು ನಿರ್ಭಯದಿಂದ ಅಮಾನವೀಯ ಪ್ರವೃತ್ತಿಯಿಂದ ವರ್ತಿಸಿರುವುದಿಲ್ಲ.

† ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಪೋಲೀಸಿನವರು ಕೊಟ್ಟ ಯಾವ ಸಮಜಾಯಿಷಿ ಇದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಓದಿದ್ದಾರೆಂದು ನನಗನಿಸಂತ್ತದೆ. ಕುಂದಾಪುರದ ತದ್ದರಸೆ ಗ್ರಾಮದ ನೀರೋಡಿಯಲ್ಲಿದ್ದ ಗೌರಿಯಾನೆ ಬಿ. ಪೂಜಾರ್ತಿ ಒಬ್ಬ ಬಡ ದುರ್ಬಲವರ್ಗದ ಕುಟುಂಬಕ್ಕೆ ಸೇರಿದ ಕೂಲಿಗಾರ ಹೆಣ್ಣುಮಗಳು, ಬೈಂದೂರಿಗೆ ಗದ್ದೆ ಕೆಲಸಕ್ಕಾಗಿ ಹೋಗಿಬರುವ ಪದ್ಧತಿ ಇತ್ತು, ನಮ್ಮ ಕಡೆ ಸುಟ್ಟವಣ್ಣು ಎಂದು ಇದೆ. ಅದನ್ನು ತಯಾರು ಮಾಡುವ ಕೃಷಿ ಜಮೀನುಗಳು ಇವೆ. ಕೆಲಸಕ್ಕಾಗಿ ಹೋದಾಗ ನಾಪತ್ತೆಯಾದಳು. ಆದರೆ ಅವಳು ನಾಪತ್ತೆಯಾದಳೊ, ಕೊಲೆಯಾದಳು ಎಂದು ಊರತುಂಬ ಪ್ರಚಾರವಾಗಿದೆ. ಈ ಪ್ರಚಾರದ ಹಿನ್ನೆಲೆಯಲ್ಲಿ ಅವಳ ಮಂಗ ಕಂಪ್ಲೈಂಟ್ ಕೊಡಲಿಕ್ಕೆ ಪೋಲೀಸ್ ಸ್ಟೇಷನ್‌ಗೆ ಹೋದನು. ಕಂಪ್ಲೈಂಟನ್ನು ತೆಗೆದುಕೊಂಡು ವಿಚಾರಣೆ ಮಾಡುವ ಬದಲು ಅನೇಕ ದಿವಸಗಳ ಕಾಲ ಆತನನ್ನು ಪೋಲೀಸ್ ಸ್ಟೇಷನ್‌ನಲ್ಲಿ ವಿಚಾರಣೆ ಮಾಡುತ್ತೇವೆಂದು ಕುಳ್ಳಿರಿಸಿಕೊಂಡು ಯಾವರೀತಿ ವಿಚಾರಣೆ ಮಾಡಿದೆ ದಸ್ಖತ್ ತೆಗೆದುಕೊಂಡಿದ್ದಾರೆ.

ಇದರ ಬಗ್ಗೆ ಸಾಕಷ್ಟು ವಿಚಾರಣೆ ಆಗಲಿಲ್ಲ. ಬೈಂದೂರಿನಲ್ಲಿ ಏನಾಗುತ್ತಿದೆ ಎಂದರೆ ಯಾರಾದರೂ ದೂರು ತೆಗೆದುಕೊಂಡು ಠಾಣೆಗೆ ಹೋದರೆ ನೀವು ಯಾವ ಪಕ್ಷಕ್ಕೆ ಸೇರಿದ್ದೀರೆಂದು ಕೇಳುತ್ತಿದ್ದಾರೆ. ಇದು ದುರಾದೃಷ್ಟ. ಇದು ಆಗಬಾರದಾಗಿತ್ತು. ಆಮೇಲೆ ದೂರು ಕೊಟ್ಟ ಹುಡುಗ ನನಗೆ ಸಿಕ್ಕಿದ. ಇದರಲ್ಲಿ ರಾಜಕೀಯ ಪ್ರಚೋದನೆ ಇದೆ ಎಂಬ ಮಾತು ಕೇಳಿಬರುತ್ತಿದೆ. ಅದಕ್ಕಾಗಿ ನಾನು ಇದನ್ನೆಲ್ಲ ಹೇಳುತ್ತಿದ್ದೇನೆ. ನನಗೆ ಈ ವಿಚಾರ ಒಂದು ತಿಂಗಳ ನಂತರ ಗೊತ್ತಾಯಿತು. ನೀನು ಅರ್ಜಿ ಕೊಟ್ಟರೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗೃಹ ಮಂತ್ರಿಗಳಿಗೆ ಕೊಟ್ಟು ವಿಚಾರಣೆ ಮಾಡಿಸುತ್ತೇನೆಂದು ಹೇಳಿದೆ. ಶಾಸಕರ ಹತ್ತಿರ ಏಕೆ ಅರ್ಜಿ ಕೊಟ್ಟೆ ಎಂದು ಆ ಹುಡುಗನನ್ನು ಗದರಿಸಿದ್ದು ಆಯಿತು. ನಾನು ಆ ಅರ್ಜಿಯನ್ನು ಗೃಹ ಮಂತ್ರಿಗಳ ಹತ್ತಿರ ತಂದು ಕೊಟ್ಟೆ. ಕಳೆದ ಸಾರಿಯೇ ಗವಾಯಿಗಳ ಸೆಳೆಯುವಂಥ ಸೂಚನೆಯನ್ನು ಕೊಟ್ಟಿದ್ದೆ. ಆದರೆ ದುರಾದೃಷ್ಟವಶಾತ್ ಬರಲಿಲ್ಲ. ಬಾರದೆ ಇದ್ದಾಗ ಗೃಹ ಮಂತ್ರಿಗಳಿಗೆ ದೂರು ಕೊಡಲಾಗಿ ಅವರು ವಿಚಾರಣೆ ನಡೆಸುತ್ತೇವೆಂದರು, ವಿಚಾರಣೆ ನಡೆಸಿ ಸರ್ಕಲ್ ಇನ್ಸ್‌ಪೆಕ್ಟರಿಂದ ಉತ್ತರ ಬಂದಿದೆ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ನೀವು ಕೂಡ ಪ್ರಯತ್ನಿಸಿ. ಯಾವುದಾದರೂ ವರ್ತಮಾನ ಬಂದರೆ ಪೋಲೀಸರಿಗೆ ತಿಳಿಸಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಇದು ಏನು ಉತ್ತರ ? ಯಾರಾದರೂ ನಾಪತ್ತೆಯಾಗಿದ್ದಾರೆ, ಕೊಲೆಯಾಗಿದ್ದಾರೆ ಎಂದು ಅರ್ಜಿ ಕೊಟ್ಟಾಗ ತನಿಖೆ ಮಾಡುವುದರ ಬದಲು ಕೊಲೆಗಾರರು ಯಾರು ಎಂದು ತಿಳಿಸಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರೆ ಕರ್ನಾಟಕ ರಾಜ್ಯದಲ್ಲಿ ಯಾವ ರೀತಿ ರಕ್ಷಣೆ ಸಿಗುತ್ತದೆ ? ಇದರಲ್ಲಿ ಇನ್ನೊಂದು ಕೇಸಿನ ಉಲ್ಲೇಖ ಕೂಡ ಇದೆ. ಅದನ್ನು ಮುಖ್ಯ ಮಂತ್ರಿಗಳು ಓದಿ ಹೇಳಿದರು. ಪದ್ಮನಾಭನ್ ಎಂಬ ವ್ಯಕ್ತಿ.....

ಅಧ್ಯಕ್ಷರು.— ಅವರು ಉತ್ತರ ಕೊಟ್ಟಿದ್ದಾರೆ, ನೀವು ವಿವರಣೆ ಕೇಳಿ.

ಶ್ರೀ ಜಿ. ಎಸ್. ಆಚಾರ್.— ಒಂದು ಚೂರು ವಿವರಿಸಿ ಹೇಳಿಬಿಡುತ್ತೇನೆ. ಇದರ ಬಗ್ಗೆ ಮಾತನಾಡುವವರು ಯಾರೂ ಇಲ್ಲ ಪದ್ಮನಾಭನ್ ಎಂಬ ವ್ಯಕ್ತಿ ಬಂದ, ಬಂದು ಯಾವುದೋ ಮನೆ ನುಗ್ಗಿದ, ಅಲ್ಲಿ ಅವನನ್ನು ಕೆಲವರು ಥಳಿಸಿದರು. ನಮಗೆ ತಿಳಿದ ವರ್ತಮಾನದ ಪ್ರಕಾರ ಪೋಲೀಸ್ ಠಾಣೆಯಲ್ಲಿ ರಾತ್ರಿ ಇಡೀ ಥಳಿಸಿದ್ದಾರೆ ಎಂದು ಬೆಳಿಗ್ಗೆ ಮಣಿಪಾಲ್ ಆಸ್ಪತ್ರೆಗೆ ಆಡ್ಮಿಟ್ ಮಾಡಿದ್ದಾರೆ. ಇದರ ಹಿನ್ನೆಲೆಯಲ್ಲಿ ಯಾರೋ ಕೊಲೆ ಮಾಡಿದ್ದಾರೆಂದು ಕೊಲೆ ಪ್ರಕರಣವಾಗಿ ಪರಿವರ್ತನೆಯಾಯಿತು. ಇದಕ್ಕೆ ದಾಖಲೆ ಇದೆ.

ಅಧ್ಯಕ್ಷರು.— ಭಾಷಣ ಮಾಡುತ್ತೀರೋ ಅಥವಾ ವಿವರಣೆ ಕೇಳುತ್ತೀರೋ ?

ಶ್ರೀ ಜಿ. ಎಸ್. ಆಚಾರ್.— ಇಂಥ ೩-೪ ಪ್ರಕರಣಗಳು ಆಗಿವೆ, ಇವೆರಡು ಮಾತ್ರವಲ್ಲ. ಅದಕ್ಕೆಲ್ಲ ದಾಖಲೆ ಕೊಡುತ್ತೇನೆ. ಇದನ್ನು ಸಿ. ಓ. ಡಿ.ಗೆ ರೆಫರ್ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ರೀತಿ ದೌರ್ಜನ್ಯ ಪ್ರತಿದಿನ ನಡೆಯುತ್ತಿದೆ. ಬಡವರನ್ನು ಮತ್ತು ದುರ್ಬಲ ವರ್ಗದವರನ್ನು ಕೇಳುವವರೇ ಇಲ್ಲ. ಇದರ ಬಗ್ಗೆ ತನಿಖೆ ಮಾಡಬೇಕು ಮತ್ತು ಚಿಂತನೆ ಮಾಡಬೇಕು, ಹಾಗೂ ಎಲ್ಲಾ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ಒತ್ತಾಯಿಸುತ್ತೇನೆ.

ಅಧ್ಯಕ್ಷರು.— ಇದರ ಬಗ್ಗೆ ೩-೪ ಜನ ಗಮನ ಸೆಳೆದಿದ್ದಾರೆ. ಅವರೆಲ್ಲರೂ ಕೇಳಿದ ಮೇಲೆ ಎಲ್ಲರಿಗೂ ಒಂದೇ ಸಾರಿ ಉತ್ತರಿಸುತ್ತಾರೆ. ಮಾನ್ಯ ಪ್ರತಾಪಚಂದ್ರಶೆಟ್ಟಿಯವರೇ ನೀವು ಸ್ಪಷ್ಟೀಕರಣ ಕೇಳಿ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಗೌರಿ ಪೂಜಾರ್ತಿ ಕಾಣೆಯಾದ ಬಗ್ಗೆ ದೂರನ್ನು ಸಲ್ಲಿಸಿದ್ದಾರೆ. ಆ ದೂರಿನಲ್ಲಿ ೫-೨-೧೯೮೮ರ ಮುಂಜಾನೆ ಗದ್ದೆಗೆ ಹೋದವಳು ತಿರುಗಿ ಬಂದಿಲ್ಲವೆಂದು ಹೇಳಿದ್ದಾರೆ. ಕೆಲವು ಸ್ಥಳೀಯ ವ್ಯಕ್ತಿಗಳು ಸಂದರ್ಭಗಳನ್ನು ಬಳಸಿಕೊಂಡು ಪೋಲೀಸರ ಮೇಲೆ ದೂರು ಕೊಡಲು ಹೋಗಿದ್ದಾರೆಂದು, ಆರೋಪಿಸಿದ್ದಾರೆಂದು ತಿಳಿದುಬಂದಿದೆ. ತಾಯಿ ಕಾಣೆಯಾಗಿದ್ದಾಳೆಂದು ದೂರು ಕೊಟ್ಟರೆ ಪೋಲೀಸರ ಮೇಲೆ ದೂರು ಕೊಟ್ಟಂತಾಗುತ್ತದೆಯೇ ? ಯಾವ ಉದ್ದೇಶದಿಂದ ಆ ವ್ಯಕ್ತಿಗಳು ಈ ರೀತಿ ಆಪಾದಿಸಿದ್ದಾರೆ ? ಆ ವ್ಯಕ್ತಿಗಳು ಯಾರು ಅವರು ಏತಕ್ಕೆ ಉತ್ತೇಜನ ಕೊಟ್ಟಿದ್ದಾರೆ? ಮತ್ತೊಂದು ಕೇಸಿನಲ್ಲಿ ಬೈಂದೂರು ಆಸ್ಪತ್ರೆಯಲ್ಲಿ ವೈದ್ಯರಿಲ್ಲದ ಪ್ರಯುಕ್ತ ಗಾಯಗೊಂಡ ಪದ್ಮನಾಭನ್‌ನನ್ನು ಶಿರೂರಿಗೆ ಕರೆದೊಯ್ಯಲಾಯಿತು ಎಂದು ಹೇಳಿದ್ದಾರೆ. ಬೈಂದೂರು ಆಸ್ಪತ್ರೆಯಲ್ಲಿ ವೈದ್ಯರಿಲ್ಲದಿರುವ ಸಂದರ್ಭದಲ್ಲಿ ಪ್ರಜ್ಞಾಹೀನವಾದ ಪದ್ಮನಾಭನ್‌ನನ್ನು ಅದಕ್ಕೂ ಮುಂದಿರತಕ್ಕ ಗ್ರಾಮಾಂತರ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆಯೇ ಅಥವಾ ಕುಂದಾಪುರ ಅಥವಾ ಮಣಿಪಾಲ್‌ನಲ್ಲಿರತಕ್ಕ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆಯೇ ? ಶಿರೂರಿಗೆ ಕರೆದುಕೊಂಡು ಹೋಗುವ ಅವಶ್ಯಕತೆ ಏನು ? ರಾತ್ರಿ ಪೋಲೀಸ್ ಠಾಣೆಯಲ್ಲಿ ಹಾಕಿ ಪದ್ಮನಾಭನ್‌ನನ್ನು ಚೆನ್ನಾಗಿ ಹೊಡೆದಿದ್ದಾರೆಂದು ವದಂತಿ ಇದೆ. ತನಿಖೆ ನಡೆಸಿದರೆ ಮಾಹಿತಿ ಸಿಗುತ್ತದೆ.

ಶ್ರೀ ಬಸವರಾಜು.— ಬೈಂದೂರಿನಲ್ಲಿ ಆದ ಪ್ರಕರಣ ತನ್ನ ತಾಯಿ ಕಣಿಯಾಗಿದ್ದಾಳೆಂದು ಪೋಲೀಸರಲ್ಲಿ ದೂರು ಕೊಟ್ಟರೆ ಅದು ಇನ್ನೊಬ್ಬರ ಪೇರಣೆಯಿಂದ ಕೊಟ್ಟ ದೂರು ಎಂದು ಯಾವ ರೀತಿ ಆಗುತ್ತದೆಂದು ಅರ್ಥವಾಗುವುದಿಲ್ಲ. ಅದೇ ರೀತಿಯಲ್ಲಿ ಈ ಪ್ರಕರಣವನ್ನು ವಿಚಾರಣೆಗಾಗಿ ಸಿ. ಒ. ಡಿ.ಗೆ ಒಪ್ಪಿಸಲಾಗುತ್ತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಈಗ ಹೇಳಿದ್ದಾರೆ. ಆದರೆ ನಮಗೆ ಒಂದು ಪ್ರಶ್ನೆ ಎದುರಾಗುತ್ತದೆ. ಯಾವುದೇ ಒಂದು ಪ್ರಕರಣ ನಡೆದಾಗ ಅದನ್ನು ನಾವು ಸದನದಲ್ಲಿ ಎತ್ತಿದಾಗ ಮಾತ್ರ ಸಿ.ಒ.ಡಿ.ಗೆ ಒಪ್ಪಿಸಲಾಗುತ್ತದೋ ಅಥವಾ ಪ್ರಕರಣದ ಮೆರಿಟ್ ಮೇಲೆ ಸಿಒಡಿಗೆ ಒಪ್ಪಿಸಲಾಗುತ್ತದೋ ಎಂಬುದು ನಮಗೆ ಬೇಕಾಗುತ್ತದೆ. ಏಕೆಂದರೆ ಕೃಷಿ ಕೂಲಿ ಕಾರ್ಮಿಕರು ಕಾಣೆಯಾದದ್ದು ನಿಜವೋ ಅಥವಾ ಅವರು ಎಲ್ಲಿದ್ದಾರೆ ? ಈ ಎಲ್ಲ ವಿಷಯದ ತನಿಖೆ ಆಗಬೇಕಾಗಿದೆ. ತನಿಖೆ ಪೋಲೀಸ್ ಸ್ಟೇಷನ್‌ನಲ್ಲಿ ಆಗಿಲ್ಲ. ಹಾಗಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಆದಷ್ಟು ಜಾಗ್ರತೆ ಸಿ. ಒ. ಡಿ. ತನಿಖೆಗೆ ಒಪ್ಪಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮೊಟ್ಟ ಮೊದಲಿಗೆ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ಯಾವುದೇ ಪೋಲೀಸ್ ಠಾಣೆಗೆ ಅದು ಬೈಂದೂರಿರಲಿ, ಕುಂದಾಪುರ ಇರಲಿ ಮಂಗಳೂರು ಇರಲಿ ಅಥವಾ ಬೆಂಗಳೂರು ಇರಲಿ ಯಾರಾದರೂ ದೂರು ತೆಗೆದುಕೊಂಡು ಹೋದಾಗ, ಪೋಲೀಸರ ರಕ್ಷಣೆ ಕೇಳಿದಾಗ ನೀವು ಯಾವ ಪಕ್ಷದವರು ಎಂದು ಕೇಳತಕ್ಕ ಕೆಲಸವನ್ನು ಯಾವುದೇ ಒಬ್ಬ ಪೋಲೀಸ್ ಅಧಿಕಾರಿ ಮಾಡಿದ್ದರೂ ಅದನ್ನು ನಾನು ಖಂಡಿಸುತ್ತೇನೆ. ಆದು ಆಗದಂತೆ ನೋಡಿಕೊಳ್ಳುತ್ತೇನೆ. ಲೀಬಲ್ ನೋಡಿಕೊಂಡು ಪರಿಹಾರ ಕೊಡತಕ್ಕದ್ದಲ್ಲ ಯಾರೇ ಬರಲಿ, ದೂರು ನಿಜವಾಗಿದ್ದರೆ. ಪ್ರಾಮಾಣಿಕವಾಗಿದ್ದರೆ ಅದರ ಬಗ್ಗೆ ತಕ್ಷಣ ಕ್ರಮವನ್ನು ತೆಗದುಕೊಳ್ಳತಕ್ಕದ್ದು ಪೋಲೀಸರ ಕರ್ತವ್ಯ. ಮೊದಲನೇ ಪ್ರಕರಣದ ಬಗ್ಗೆ ಹೇಳುವುದಾದರೆ ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಮತ್ತು ಜಿ. ಎಸ್. ಆಚಾರ್ ಅವರು ಸಿಒಡಿ ತನಿಖೆಗೆ ಒಪ್ಪಿಸಬೇಕು ಎಂದು ಹೇಳಿದರು. ಈಗಾಗಲೇ ಸಿಒಡಿಗೆ ಒಪ್ಪಿಸಲಾಗಿದೆ. ನಾನು ಹೇಳಿದ್ದೇನೆಂದರೆ ಕಾಗದ ಪತ್ರಗಳನ್ನು ಅವರಿಗೆ ಒಪ್ಪಿಸಲಾಗುತ್ತಿದೆ ಎಂದು. ಶ್ರೀಮತಿ ಗೌರಿ ಪೂಜಾರ್ತಿ ಕೊಲೆ ಆಗಿಲ್ಲ. ಇದ್ದಾರೆ. ಆದರೆ ಕಾಣೆಯಾದದ್ದು ಯಾವ ಕಾರಣದಿಂದ ಎಂಬುದನ್ನು ಸಿಒಡಿಯವರು ಪತ್ತೆ ಹಚ್ಚುತ್ತಾರೆ. ಎರಡನೇ ಪ್ರಕರಣದ ಬಗ್ಗೆ ಬಂದು ವಿಚಾರವನ್ನು ಬಸವರಾಜ್ ಅವರೂ ಒಪ್ಪಿಕೊಂಡಿದ್ದಾರೆ. ಕೃಷ್ಣ ಎಂಬುವರ ಮನೆಗೆ ಪದ್ಮನಾಭ ಹೋದಾಗ ಜನರು ಅವರನ್ನು ಹೊಡೆದರು ಎಂಬುದು ಈಗಿರತಕ್ಕ ಪ್ರಶ್ನೆ. ಆ ದಿವಸ ಪೋಲೀಸ್ ಸ್ಟೇಷನ್‌ಗೆ ತಂದಾಗ ಪ್ರಜ್ಞೆ ಇತ್ತೋ, ಜೀವ ಇತ್ತೋ ಅಥವಾ ಅಲ್ಲಿಗೆ ಬಂದ ಮೇಲೆ ಪೋಲೀಸರು ಹೊಡೆದರೋ ಇದನ್ನು ನೋಡಬೇಕಾಗಿದೆ. ೧೩-೧೪ ಜನ ಇದ್ದಾರೆ ಎಂದು ಹೇಳಿದ ಮೇಲೆ ಈ ವಿಚಾರ ಮುಚ್ಚಿಡತಕ್ಕದು ಸಾಧ್ಯವಿಲ್ಲ. ೧೪ ಜನರಲ್ಲಿ ಯಾರು ಹೊಡೆದಿದ್ದಾರೆ ಎಂದು ಗೊತ್ತಾಗಿದೆಯೋ ಅಂಥವರ ಮೇಲೆ ಕೇಸ್ ಹಾಕಿದ್ದಾರೆ. ವಿಚಾರಣೆ ಆಗಲಿ. ಇದರಲ್ಲಿ ಯಾವುದೇ ರೀತಿಯಲ್ಲಿ ಹಿಂದೆ ಮುಂದೆ ನೋಡತಕ್ಕ ಅಗತ್ಯ ಇಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಇಲ್ಲಿರತಕ್ಕದ್ದು ಎರಡು ವಿಷಯ. ಒಂದು ವಾದ ಜನರು ಹೊಡೆದು ಆಸ್ಪತ್ರೆಗೆ ಸಾಗಿಸಲಾಗಿದೆ ಎಂಬುದು. ಇನ್ನೊಂದು ವಾದ ಜನರು ಪೋಲೀಸರ ಕೈಯಲ್ಲಿ ಕೊಟ್ಟಾಗ ಪೋಲೀಸರು ಹೊಡೆದು ಆಸ್ಪತ್ರೆಗೆ ಸಾಗಿಸಲಾಗಿದೆ ಎಂಬುದು. ಕೇಸ್ ದಾಖಲು ಮಾಡಿದ ನಂತರ ಪೋಲೀಸರ ಮೇಲೆ ದೂರು ಕೊಡುವವರು ಯಾರು ? ಜನರು ಹೊಡೆದಾಗ ಪ್ರಜ್ಞಾಹೀನ ಸ್ಥಿತಿಗೆ ಬಂದಿದ್ದಾರಾ ? ಆಥವಾ ಪೋಲೀಸ್ ಸ್ಟೇಷನ್‌ಗೆ ಹೋಗಿ ಪ್ರಜ್ಞಾಹೀನ ಸ್ಥಿತಿಗೆ ಬಂದ ನಂತರ ಕೇಸ್ ದಾಖಲು ಮಾಡಿದ್ದಾರಾ ?

ಶ್ರೀ ರಾಮಕೃಷ್ಣ ಹೆಗಡೆ — ನೋಡಿದಂಥ ಜನರು ಹೇಳುತ್ತಾರೆ. ಪ್ರಜ್ಞಾಹೀನ ಆಗಿರಲಿಲ್ಲ ಅಂದರೆ ಪೋಲಿಸರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ ಎಸ್. ಆಚಾರ್ — ಬುದ್ಧಿಪಂಕಿಯಿಂದ ರೆಕಾರ್ಡ್ ಮಾಡುವ ಕ್ರಮಗಳು ನಡೆಯುತ್ತವೆ. ಇದರ ಬಗ್ಗೆ ಚಿಂತನೆ ಮಾಡಬೇಕು. ಊರಿನಲ್ಲಿ ಹೊಡೆತ ಬಿದ್ದಿದೆ ಎಂದು ಹೇಳುತ್ತಾರೆ. ಅವರು ಕೇಡಳದವರು. ಅವರನ್ನು ಕೇಳುವವರಿಲ್ಲ. ತಪ್ಪು ಮಾಡಿದವರು ಕೊಲೆ ಆಗಬೇಕಾಗಿಲ್ಲ. ಅವರು ಮರಣಾಂತಿಕವಾಗಿ ಪೆಟ್ಟು ತಿನ್ನಬೇಕಾಗಿಲ್ಲ. ಈ ರೀತಿ ರೆಕಾರ್ಡ್ ತಯಾರಾಗುತ್ತಿದೆ.

ಮೊದಲನೇ ಪ್ರಕರಣದಲ್ಲಿ ಗೌರಿ ಪೂಜಾರ್ತಿ ಕೊಲೆಯಾಗಿದ್ದಾರೆ ಎಂದು ವರ್ತಮಾನ ಇದೆ. ಅವರನ್ನು ಹುಡುಕುವುದು ಬಿಟ್ಟು, ಅವರು ಎಷ್ಟು ವರ್ಷದ ಹಿಂದೆ ಗಂಡನನ್ನು ಬಿಟ್ಟರು, ಎಷ್ಟು ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾರೆ, ಅವರಿಗೆ ಎಷ್ಟು ಮಕ್ಕಳು ಹುಟ್ಟಿದ್ದಾರೆ ಇದು ಬೇಕಾಗಿಲ್ಲ. ನ್ಯಾಯವಾದ ರೀತಿಯಲ್ಲಿ ವಿಚಾರಣೆ ಆಗಬೇಕು.

ಶ್ರೀ ರಾಮಕೃಷ್ಣ ಹೆಗಡೆ:— ಇದನ್ನು ಸಿಐಡಿಗೆ ವಹಿಸಿರುವುದರಿಂದ ಇದರಲ್ಲಿ ಸತ್ಯಾಂಶ ಏನಿದೆ ಎಂಬುದು ಹೊರಗಡೆ ಬರುತ್ತದೆ. ಗೌರಿ ಪೂಜಾರ್ತಿಯನ್ನು ಹುಡುಕಿಕೊಂಡು ಹೋಗಿ ಸಂಗ್ರಹಿಸಿದ ಮಾಹಿತಿಯನ್ನು ತಮ್ಮ ಮುಂದಿಟ್ಟಿದ್ದೇನೆ. ಅವಳೂ ಒಬ್ಬ ಮನುಷ್ಯ ಎಂಬ ಭಾವನೆಯಿಂದ ಕೆಲಸ ಮಾಡಿದ್ದೇವೆ.

೨) ಬೆಂಗಳೂರು ಹೋಟೆಲ್‌ಗಳಲ್ಲಿರುವ ವಸತಿ ಗೃಹಗಳಿಗೆ ದುಬಾರಿ ಬಾಡಿಗೆ ಪಡೆಯಲಾಗುತ್ತಿರುವುದು.

ಶ್ರೀ ಆರ್. ವೆಂಕಟರಾಮಯ್ಯ:—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಹೋಟೆಲ್‌ಗಳಲ್ಲಿರುವ ವಸತಿ ಗೃಹಗಳಿಗೆ ದುಬಾರಿ ಬಾಡಿಗೆ ಪಡೆಯಲಾಗುತ್ತಿರುವುದು ಮತ್ತು ಧಾರಣೆಗಳನ್ನು ಹೆಚ್ಚಿಸುತ್ತಿರುವುದನ್ನು ನಿಯಂತ್ರಿಸದೇ ಇರುವುದರಿಂದ ಜನರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ್ ಅನ್ವರಿ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಖಾತೆಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವಿಚಾರ ಸಂಪೂರ್ಣವಾಗಿ ನನ್ನ ಖಾತೆಗೆ ಬರದಿರುವುದರಿಂದ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಬರುವುದಕ್ಕೆ ಮಾತ್ರ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಆದರಲ್ಲೂ ಬೆಂಗಳೂರು ನಗರದಲ್ಲಿ ಮೂರು ದರ್ಜೆಯ ಹೋಟೆಲುಗಳು ಇರುತ್ತವೆ. ಅವುಗಳನ್ನು "ಎ" ದರ್ಜೆ ಮತು "ಬಿ" ದರ್ಜೆ ಮತು "ಸಿ" ದರ್ಜೆ ಎಂದು ವಿಂಗಡಿಸಿರುತ್ತಾರೆ.

"ಎ" ದರ್ಜೆಯ ಹೋಟೆಲುಗಳಲ್ಲಿ ಸಾಮಾನ್ಯವಾಗಿ "ಬಿ" ಮತ್ತು "ಸಿ" ದರ್ಜೆ ಹೋಟೆಲುಗಳಿಗಿಂತ ಬೆಲೆಗಳು ಹೆಚ್ಚಾಗಿರುತ್ತವೆ ಸರ್ಕಾರದ ವತಿಯಿಂದ ಹೋಟೆಲ್‌ಗಳ ತಿಂಡಿಗಳ ಬೆಲೆಯನ್ನು ಇಳಿಸಲು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ. ೨೫-೧-೧೯೮೮ ರಂದು ಸಗಟು ಆಹಾರ ಧಾನ್ಯ ಮತ್ತು ದ್ವಿದಳ ಧಾನ್ಯ ವರ್ತಕರ ಸಂಘ ಮತ್ತು ಆಹಾರ ಧಾನ್ಯ ವರ್ತಕರ ಸಂಘ, ಬೆಂಗಳೂರು ಇವರ ಸಭೆಯನ್ನು ಹಾಗೂ ದಿನಾಂಕ. ೩-೨-೧೯೮೮ ರಂದು ಹೋಟೆಲು ಮಾಲೀಕರ ಸಂಘದ ಪದಾಧಿಕಾರಿಗಳು ಆಹಾರಧಾನ್ಯ (ಸಗಟು) ಹಾಗೂ ದ್ವಿದಳ ಧಾನ್ಯ ವರ್ತಕರ ಸಂಘ ಮತ್ತು ಆಹಾರಧಾನ್ಯ (ಗ್ರೈನ್ಸ್) ವರ್ತಕರ ಸಂಘದ ಪದಾಧಿಕಾರಿಗಳೊಂದಿಗೆ ಸಭೆಯನ್ನು ಕಾರ್ಯದರ್ಶಿಗಳು ಆಹಾರ ಮತ್ತು ಸಾರಿಗೆ ಇಲಾಖೆಯವರ ಅಧ್ಯಕ್ಷತೆಯಲ್ಲಿ ಜರುಗಿಸಲಾಗಿದೆ. ಈ ಸಭೆಯಲ್ಲಿ ಹೋಟೆಲು ಪದಾಧಿಕಾರಿಗಳನ್ನು ಹಾಲಿ ಜಾರಿಯಲ್ಲಿರುವ ಬೆಲೆಗಳನ್ನು ಕಡಿಮೆ ಮಾಡುವಂತೆ ಕೇಳಲಾಯಿತು. ಈ ಬಗ್ಗೆ ಸಂಘದ ಅಧ್ಯಕ್ಷರು ಇತ್ತೀಚೆಗೆ ಆಗತ್ಯ ವಸ್ತುಗಳ ಹೆಚ್ಚಳ, ವಿದ್ಯುಚ್ಛಕ್ತಿ ಹಾಲು, ತರಕಾರಿ ಮುಂತಾದ ಕಚ್ಚಾ ವಸ್ತುಗಳ ಬೆಲೆಗಳು ವಿಪರೀತವಾಗಿ ಹೆಚ್ಚಾಗಿರುವುದರಿಂದ ತಿಂಡಿ ತಿನಿಸುಗಳು ಬೆಲೆಯನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಯಿತೆಂದೂ ಅಲ್ಲದೆ ಈ ಬೆಲೆ ಏರಿಕೆಗೆ ಬಾಡಿಗೆ, ವಹಿವಾಟು ತೆರಿಗೆ, ವೈಭವ ತೆರಿಗೆ, ನೌಕರರ ಭವಿಷ್ಯ ನಿಧಿ, ಸಂಬಳ ಇತ್ಯಾದಿಗಳ ಏರಿಕೆಯೂ ಕಾರಣವೆಂದು ತಿಳಿಸಿರುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ:—ಮಾನ್ಯ ಅಧ್ಯಕ್ಷರೆ, ೧೯೮೩ ರಲ್ಲಿ ಇಡ್ಲಿ ಬೆಲೆ ೨೫ ಪೈಸೆ ಇದ್ದುದು ಇವತ್ತು ೧.೨೫ ರೂಪಾಯಿ ಆಗಿದೆ, ಮಸಾಲೆ ದೋಸೆ ೧ ರೂಪಾಯಿ ಇದ್ದುದು ಇವತ್ತು ೫ ರೂಪಾಯಿ ಆಗಿದೆ, ಕಾಫಿ ೫೦ ಪೈಸೆ ಇದ್ದುದು ಇವತ್ತು ೧.೫೦ ರೂಪಾಯಿ ಆಗಿದೆ. ನೀವು ಎ.ಬಿ.ಸಿ. ಎಂದು ಇಟ್ಟುಕೊಂಡಿರುವುದರಿಂದ ಇಷ್ಟೊಂದು ಧಾರಣೆಗಳು ಹೆಚ್ಚುವುದಕ್ಕೆ ಅವಕಾಶವಾಗಿದೆ, ಸಾಧಾರಣ ಊಟ ೫ ರೂಪಾಯಿಯಿಂದ ೮ ರೂಪಾಯಿವರೆವಿಗೂ ಪ್ಲೇಟ್ ಮಿಲ್ಸ್ ಇದೆ. ಕಷ್ಟಪಟ್ಟು ದುಡಿಯತಕ್ಕ ಒಬ್ಬ ವ್ಯಕ್ತಿ ಇವತ್ತು ೧೦ ರೂಪಾಯಿಯಷ್ಟು ತಿಂದರೂ ಹೊಟ್ಟೆ ತುಂಬುವುದಿಲ್ಲ.